ಆ. ಕೊಳವೆ ಬಾವಿ ನಿರ್ವಹಣೆ ಹಾಗೂ ದುರಸ್ಥಿಗಳನ್ನು ಬೆಂಗಳೂರು ಜಲಮಂಡಲಿ ನಿರ್ವಹಿಸುತ್ತಿದ್ದು ಇದಕ್ಕೆ ಪ್ರತಿ ವರ್ಷ ಸುಮಾರು ರೂ.200.00 ಲಕ್ಷಗಳನ್ನು ಮಂಡಳಿಯಿಂದ ಭರಿಸಲಾಗುತ್ತಿದೆ. ಇವುಗಳ ಬಗ್ಗೆ ಯಾವುದೇ ಬಿಕ್ಕಟ್ಟಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

1616 (2181) ಶ್ರೀ ಪಾಪರೆಡ್ಡಿ ಎ. (ರಾಯಚೂರು) ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ರಾಯಚೂರು ಮತಕ್ಷೇತ್ರದಲ್ಲಿ ಟ್ರಾಫಿಕ್ ಪೋಲೀಸ್ ಸ್ಟೇಷನ್‌ಗಳು ಎಷ್ಟಿವೆ?

ಆ. ನಗರದಲ್ಲಿ 3.5 ಲಕ್ಷದಿಂದ 4.0 ಲಕ್ಷ ಜನಸಂಖ್ಯೆ ಆಗಿದೆ. ದ್ವಿಚಕ್ರವಾಹನ ಲಾರಿಗಳು, ಟ್ರಾಕ್ಟರ್‌ಗಳು, ತೀವ್ರವಾಗಿ ಹೆಚ್ಚಾಗುತ್ತಿವೆ. ನಗರವೂ ವೇಗವಾಗಿ ಬೆಳೆಯುತ್ತಿದೆ. ಈಗ ಇರುವ ಟ್ರಾಫಿಕ್ ಬಹಳ ಕಂಜೆಸ್ಟೆಡ್ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ. ಈಗಿರುವ ಟ್ರಾಫಿಕ್ ಪೋಲೀಸ್ ಸ್ಟೇಷನ್‌ನಿಂದ ಕಂಟ್ರೋಲ್ ಮಾಡಲು ಸಾಧ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೆ?

ಈ. ಪ್ರತಿದಿನ ಅಪಘಾತಗಳು ಹೆಚ್ಚಾಗುತ್ತಿವೆ. ಮಕ್ಕಳು, ವೃದ್ದರು ಅಪಘಾತಕ್ಕೆ ತುತ್ತಾಗುತ್ತಿರುವ ವರದಿಗಳಿವೆಯೆ?

ಉ. ಈ ನಿಟ್ಟಿನಲ್ಲಿ ಸರ್ಕಾರ ಸುಧಾರಣೆ ತರಲು ಕೈಗೊಂಡ ಕ್ರಮಗಳಾವುವು?

ಊ. ಟ್ರಾಫಿಕ್ ಪೋಲೀಸ್ ಸ್ಟೇಷನ್ ಹಾಗೂ ಪೋಲೀಸ್ ಸ್ಟೇಷನ್‌ಗಳನ್ನು ಹೆಚ್ಚು ಮಾಡಲು, ಈಗಿರುವ ಸಿಬ್ಬಂದಿ ಹೆಚ್ಚು ಮಾಡಲು ಹಾಗೂ ವಿಶೇಷ ತರಬೇತಿ ಹೊಂದಿರುವ ಪೋಲಿಸರನ್ನು ನೀಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುವುದು ?

ಋ. ಇನ್ನೊಂದು ಟ್ರಾಫಿಕ್ ಪೋಲಿಸ್ ಸ್ಟೇಷನ್ ಹಾಗೂ ಮಹಿಳಾ ಪೋಲಿಸ್ ಸ್ಟೇಷನ್ ರಾಯಚೂರಿಗೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು):

ಅ. ರಾಯಚೂರು ಮತಕ್ಷೇತ್ರದಲ್ಲಿ ಒಂದು ಟ್ರಾಫಿಕ್ ಪೋಲಿಸ್ ಠಾಣೆ ಇದೆ.

ಆ. ಬಂದಿದೆ.

ಇ. ಇಲ್ಲ.

ಈ. ಪ್ರತಿದಿನವು ಅಪಘಾತ ಸಂಭವಿಸಿದೆ ಮಕ್ಕಳು ಮತ್ತು ವೃದ್ದರು ಅಪಘಾತಕ್ಕೆ ಈಡಾಗುತ್ತಿದ್ದಾರೆ ಎಂಬುವುದು ಸತ್ಯಕ್ಕೆ ದೂರವಾಗಿದ್ದು, ಈ ಬಗ್ಗೆ ವರದಿಗಳಿವೆ.

ಉ. ಈ ನಿಟ್ಟಿನಲ್ಲಿ ನಗರದ ಎಲ್ಲಾ ರಸ್ತೆಗಳನ್ನು ಡಾಂಬರೀಕರಣಗೊಳಿಸಲಾಗಿದೆ. ಅಪಘಾತಗಳನ್ನು ತಡೆಗಟ್ಟುವ ರಸ್ತೆ ಸುರಕ್ಷತಾ ಸಪ್ತಾಹಗಳನ್ನು ಹಮ್ಮಿಕೊಳ್ಳಲಾಗಿದೆ. ರಸ್ತೆಯ ಬದಿಯಲ್ಲಿ ಸೂಚನಾಫಲಕಗಳನ್ನು ತೂಗು ಹಾಕಿ ಚಾಲಕರಿಗೆ ಸೂಚನೆ ನೀಡಲಾಗುತ್ತಿದೆ. ಮತ್ತು ರಾಯಚೂರು ನಗರದಲ್ಲಿ ಸಂಚಾರ ನಿಯಂತ್ರಣಕ್ಕಾಗಿ ನಾಲ್ಕು ಸ್ಥಳಗಳಲ್ಲಿ ಸ್ವಯಂ ಚಾಲಿತ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸಲಾಗಿದೆ.

ಊ. ಈ ಬಗ್ಗೆ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರಿಂದ ಪ್ರಸ್ತಾವನೆ ಬಂದಲ್ಲಿ ಸರ್ಕಾರ ಪರಿಶೀಲಿಸುವುದು.

ಋ. ಸದ್ಯಕ್ಕೆ ಅವಶ್ಯಕತೆ ಕಂಡುಬಂದಿಲ್ಲ.